**ಸಾಕ್ಷಿಯನ್ನು ದಿನಾಂಕಃ 18-09-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**<u>ಪಾಟೀಸವಾಲುಃ ವಾದಿ ಪರ ವಕೀಲರವರಿಂದಃ</u>**

ನಾವು 4 ಜನ ಅಣ್ಣ ತಮ್ಮಂದಿರುಹಾಗೂ ನನಗೆ 3 ಜನ ಸಹೋದರಿಯರು ಇರುವರು. ನಾವು 2002 ರಲ್ಲಿ ಪಾಲು ವಿಭಾಗ ಪತ್ರವನ್ನು ಮಾಡಿಕೊಂಡಿರುತ್ತೇವೆ. ಸದರಿ ಪಾಲು ಪಟ್ಟಿಯಲ್ಲಿ ನನ್ನ ಸಹೋದರಿಯ ಸಹಿಗಳು ಹಾಗೂ ಉಳಿದ ಸಹೋದರರ ಸಹಿಗಳು ಇರುವುದಿಲ್ಲ.

2. ನಿಡಿ 1 ಅಂದರೆ 2001 ರಲ್ಲಿ ಆಗಿರುವ ಪಾಲು ಪಟ್ಟಯಲ್ಲಿ ನನ್ನ ಹಾಗೂ ಬಸವರಾಜಪ್ಪನ ಸಹಿಗಳು ಮಾತ್ರ ಇರುತ್ತವೆ. ನಿಪಿ 4 ರಲ್ಲಿ ನನ್ನ ಸಹಿ ಇರುವುದಿಲ್ಲ. ಆದ್ದರಿಂದ ಅದಕ್ಕೆ ಯಾವುದೇ ಕಾನೂನಿನ ಮಾನ್ಯತ ಇರುವುದಿಲ್ಲ ಅಂದರೆ ಸರಿಯಲ್ಲ. ಸದರಿ ದಾಖಲೆ ಅಧಾರದ ಮೇಲೆ ಸುಳ್ಳಾಗಿ ಮುಟೇಶನ್ ಮಾಡಿಸಿಕೊಂಡಿದ್ದೇವೆ ಅಂದರೆ ಸರಿಯಲ್ಲ. ನಿಪಿ 4 ನ್ನು ನಾನು ವಾದಿಗೆ ಬರೆದುಕೊಟ್ಟಿದ್ದೇನೆ ಅಂದರೆ ಸರಿಯಲ್ಲ. ನಿಪಿ 4 ದಾಖಲೆಯನ್ನು ನಾನು ಸಾಕ್ಷಿದಾರರ ಸಮಕ್ಷಮ ಬರೆದುಕೊಟ್ಟಿರುವೆನು ಅಂದರೆ ಸರಿಯಲ್ಲ. ನಿಪಿ 4 ನ್ನು ತಯಾರು ಮಾಡಿರುವ ಚಾಪಾಕಾಗದವನ್ನು ನಾನೇ ಖರೀದಿ ಮಾಡಿ ತಂದಿರುವೆನು ಅಂದರೆ ಸರಿಯಲ್ಲ. ನನ್ನ ಅಣ್ಣನಿಗೆ ಮೋಸ ಮಾಡಲು ನಿಪಿ 4 ನ್ನು ನಾನು ಬರೆದುಕೊಟ್ಟಿದ್ದರೂ ಸಹಿತ ಬರೆದುಕೂಟ್ಟಿಲ್ಲವೆಂದು ಸುಳ್ಳು ಹೇಳುತ್ತಿದ್ದಃನೆ ಅಂದರೆ ಸರಿಯಲ್ಲ.

3. ಬಸವರಾಜಪ್ಪನು ತನ್ನ ಹೆಂಡತಿ ಮನೆಯವರು ಕೊಟ್ಟ ಜಾಗದಲ್ಲಿ ಮನೆ ಕಟ್ಟಿಸಿಕೊಂಡಿರುವರು ಅಂದರೆ ಸರಿಯಲ್ಲ. ದಾವಣಗೆರೆಯಲ್ಲಿ ನಾನು ಕಾಟನ್ ಮಿಲ್ಲಿನಲ್ಲಿ ಕೆಲಸ ಮಾಡುತ್ತಿದ್ದು ನಾನು ಯಾವತ್ತೂ ಬಸವರಾಜಪ್ಪನೊಂದಗೆ ಜಂಟಿ ಕುಟುಂಬದಲ್ಲಿ ವಾಸವಿರಲಿಲ್ಲ ಅಂದರೆ ಸರಿಯಲ್ಲ. ನಾನು ಕಾಟನ್ ಮಿಲ್ಲಿನಲ್ಲಿ ಕೆಲಸ ಮಾಡುತ್ತಿದ್ದಾಗ ದಾವಣೆಗೆರೆಯಲ್ಲಿ ಒಂದು ಮನೆಯನ್ನು ಅಂಗ್ರಿಮೆಂಟ್ ಅಡಿಯಲ್ಲಿ ಖರೀದಿ ಮಾಡಿದ್ದೇವೆ ಅಂದರೆ ಸರಿ. ಸಾಕ್ಷಿಗೆ ವಕೀಲರು ಅಂಗ್ರಿಮೆಂಟನ್ನು ತೋರಿಸಿದ್ದು ಅದನ್ನು ಮತ್ತು ಅದರಲಿಲರುವ ತನ್ನ ಸಹಿಯನ್ನು ಸಾಕ್ಷಿಯು ಒಪ್ಪಿಕೊಂಡ ಕಾರಣ

ಅದನ್ನು ***ನಿಪಿ 6*** ಎಂದು ಸಾಕ್ಷಿಯ ಸಹಿಯನ್ನು ***ನಿಪಿ 6(ಎ)*** ಎಂದು ಗುರುತಿಸಲಾಯಿತು.

4. ಹಿರಿಯರು ರಾಜಿ ಪಂಚಾಯತಿಗೆ ಕರೆದರೂ ನಾನು ತಪ್ಪಿಸಿಕೊಂಡು ಹೋಗುತ್ತಿದ್ದೆ ಅಂದರೆ ಸರಿಯಲ್ಲ. 1974 ರಲ್ಲಿ ಬಾಯಿ ಮಾತಿನ ಮೂಲಕ ವಿಭಾಗ ಮಾಡಿಕೊಂಡಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 1989 ರಲ್ಲಿ ನಾವು ಒಟ್ಟು ಕುಟುಂಬದಲ್ಲಿದ್ದಾಗ ಪಾಲು ವಿಭಗವನ್ನು ಮಾಡಿಕೊಂಡಿದ್ದೇವೆ ಅಂದರೆ ಸರಿಯಲ್ಲ. 1989 ರ ಪಾಲು ಪಟ್ಟಿಯನ್ನು ಬಿಟ್ಟು ನಾನು 2001 ರಲ್ಲಿನ ಪಾಲು ಪಟ್ಟಿಯನ್ನು ಸುಳ್ಳಾಗಿ ಸೃಷ್ಟಿಸಿದ್ದೇನೆ ಅಂದರೆ ಸರಿಯಲ್ಲ. ವಾದಿಗೆ ಜಮೀನನ್ನು ಬಿಟ್ಟು ಕೊಡಬೇಕಾಗುತ್ತದೆ ಎಂಬ ಕಾರಣಕ್ಕೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿಪಿ 4 ರಲ್ಲಿರುವ ಸಹಿಯನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲು ನನ್ನ ತಕರಾರು ಇರುವುದಿಲ್ಲ.

**ಮರು ವಿಚಾರಣೆಃ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿಯಿದೆ.**

**18-09-2025**
**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ** 18.09.2025